## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**: ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಧಿಕಾರದ ವ್ಯಾಪ್ತಿಯಲ್ಲಿ ಬರುವ 5 ಸೆಕ್ಟರಗಳಲ್ಲಿನ ಉದ್ಯಾನವನಗಳನ್ನು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ 30 ವರ್ಷಗಳ ಲೀಸ್ ಆಧಾರದ ಮೇಲೆ ಹಸ್ತಾಂತರಿಸುವ ಕುರಿತು.

***

**ಓದಲಾಗಿದೆ:-** ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ: ವ್ಯ(ಆ)/ಕೃಭಾಜನಿನಿ/ತಾಂಸ-3/130ನೇ ಬೋರ್ಡ್/11/2020-21/1013 ದಿನಾಂಕ:27.07.2021.

**ಪ್ರಸ್ತಾವನೆ:-**

ಮೇಲೆ ಓದಲಾದ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ರವರ ಪತ್ರದಲ್ಲಿ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ 5 ಸೆಕ್ಟರ್ ಸಂ. 01, 09, 13, 41 & 70 ರಲ್ಲಿನ ಉದ್ಯಾನವನಗಳನ್ನು 30 ವರ್ಷಗಳ ಅವಧಿಗೆ ರೂ.1,500/- ರಂತೆ ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ ನಿಗಧಿಪಡಿಸಿ ಲೀಸ್ ಆಧಾರದ ಮೇಲೆ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸುವ ಪ್ರಸ್ತಾವನೆಯನ್ನು ದಿ:22.07.2021 ರಂದು ಜರುಗಿದ ನಿಗಮದ ನಿರ್ದೇಶಕರ ಮಂಡಳಿ 130ನೇ ಸಭೆಯಲ್ಲಿ ಮಂಡಿಸಲಾಗಿದ್ದು, ಮಂಡಳಿಯು ಪ್ರಸ್ತಾವನೆ ಬಗ್ಗೆ ಚರ್ಚಿಸಿ ಈ ಕೆಳಗಿನಂತೆ ತೀರುವಳಿಯನ್ನು ನೀಡಿರುತ್ತದೆ ಎಂದು ವರದಿ ಮಾಡಿರುತ್ತಾರೆ.

*"ಮಂಡಳಿಯು ಸದರಿ ವಿಷಯದ ಬಗ್ಗೆ ವಿವರಣಾತ್ಮಕ ಕಾರ್ಯಸೂಚಿಯನ್ನು ಅವಗಾಹಿಸಿತು. ಸಭೆಯು ಸದರಿ ವಿಷಯದ ಕುರಿತು ಅವಲೋಕಿಸಿ, ಚರ್ಚಿಸಿದಂತೆ ಬಿ.ಟಿ.ಡಿ.ಎ. ಪ್ರಾಧಿಕಾರದ 135ನೇ ಮಂಡಳಿ ಸಭೆಯ ನಿರ್ಣಯದಂತೆ ಹಾಗೂ ಆಯುಕ್ತರು, ಪು & ಪು ಮತ್ತು ಭೂಸ್ವಾಧೀನ, ಬಾಗಲಕೋಟೆ, ಇವರ ಶಿಫಾರಸ್ಸಿನಂತೆ ಸರ್ಕಾರದ ಸಂಸ್ಥೆಯಾದ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ, ಇವರಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ಬಾಗಲಕೋಟೆ, ನವನಗರದಲ್ಲಿರುವ 05 ಸೆಕ್ಟರ್ ಸಂ. 01, 09, 13, 41 ಮತ್ತು 70 ಗಳಲ್ಲಿನ ಉದ್ಯಾನವನಗಳನ್ನು ಲೀಸ್ ಆಧಾರದ ಮೇಲೆ ಹಸ್ತಾಂತರಿಸಲು ಈ ಕೆಳಕಂಡ ಷರತ್ತುಗೊಳಪಟ್ಟು ಮಂಡಳಿ ಸಭೆಯು ಅನುಮೋದಿಸಿರುತ್ತದೆ.*

1. *ಬಾಗಲಕೋಟೆ ನವನಗರದಲ್ಲಿರುವ 05 ಸೆಕ್ಟರ್ ಸಂ. 01, 09, 13, 41 ಮತ್ತು 70 ಗಳಲ್ಲಿನ ಉದ್ಯಾನವನಗಳಿಗೆ ರೂ.1500/- ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ ನಿಗಧಿಪಡಿಸುವುದು ಮತ್ತು ಪ್ರತಿ ವರ್ಷದ ಲೀಸ್ ಮೊತ್ತವನ್ನು ನಿಗಮದ ಖಾತೆಗೆ ಭರಿಸುವುದು.*
2. *ಲೀಸ್ ಅವಧಿಯನ್ನು 30 ವರ್ಷಕ್ಕೆ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಸಂಸ್ಥೆಯೊಂದಿಗೆ ಕರಾರು ಮಾಡಿಕೊಳ್ಳುವುದು.*
3. *ಲೀಸ್ ಅವಧಿಯಲ್ಲಿ ಪ್ರತಿ 05 ವರ್ಷದ ಅವಧಿ ನಂತರ ಶೇ.10 ರಷ್ಟು ಲೀಸ್ ದರವನ್ನು ಹೆಚ್ಚಿಸಿ, ಲೀಸ್ ಮೊತ್ತವನ್ನು ನಿಗದಿಪಡಿಸುವುದು*
4. *ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ 135ನೇ ಬೋರ್ಡ್ ಸಭೆಯ ತಿರುವಳಿಯಲ್ಲಿನ ಆಗ್ರಿಮೆಂಟ್ ಷರತ್ತುಗಳನ್ನು ಅಳವಡಿಸಿದ ಮತ್ತು ಆಗ್ರಿಮೆಂಟ್ ಕರಾರುಗಳನ್ನು ಒಳಗೊಂಡಂತೆ ಲೀಸ್ ಒಪ್ಪಂದ ಪತ್ರದ ಕರಡನ್ನು ಪ್ರಾಧಿಕಾರದ ಕಾನೂನು ಸಲಹೆಗಾರರಿಂದ ಪಡೆದುಕೊಂಡು ಹಾಗೂ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕ್ರಮ ಕೈಗೊಳ್ಳುವುದು.*
5. *ಪ್ರಸ್ತಾಪಿಸಿದ 5 ಸೆಕ್ಟರ್‌ಗಳಲ್ಲಿನ ಉದ್ಯಾನವನಗಳನ್ನು ಲೀಸ್ ಅವಧಿಯು ಪೂರ್ಣಗೊಂಡ ನಂತರ ಸುಸ್ಥಿತಿಯಲ್ಲಿ ಮರಳಿ ಪ್ರಾಧಿಕಾರಕ್ಕೆ ಹಸ್ತಾಂತರಿಸುವುದು ಅಥವಾ ಲೀಸ್ ಅವಧಿಯನ್ನು ಮುಂದುವರೆಸುವುದು ಇಚ್ಛಿಸಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು."*

ಮುಂದುವರೆದು ವ್ಯವಸ್ಥಾಪಕ ನಿರ್ದೇಶಕರು, ಕೃ.ಭಾ.ಜ.ನಿ. ರವರು ನಿಗಮದ ಮಂಡಳಿಯ ಅನುಮೋದನೆಯಲ್ಲಿನ ಷರತ್ತಿಗೊಳಪಟ್ಟು, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ 5 ಸೆಕ್ಟರ ಸಂಖ್ಯೆ:01, 09, 13, 41 & 70 ರಲ್ಲಿನ ಉದ್ಯಾನವನಗಳನ್ನು 30 ವರ್ಷಗಳ ಅವಧಿಗೆ, ಪ್ರತಿ ವರ್ಷ, ಪ್ರತಿ ಎಕರೆಗೆ ರೂ.1,500/- ರಂತೆ ನಿಗಧಿಪಡಿಸಿ, ಲೀಸ್ ಆಧಾರದ ಮೇಲೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇವರಿಗೆ ಹಸ್ತಾಂತರಿಸುವ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಇ-ಸಂಖ್ಯೆ:ಜಸಂಇ 231 ಕೆಬಿಎನ್ 2020, ಬೆಂಗಳೂರು, ದಿನಾಂಕ:17/01/2022**

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ 5 ಸೆಕ್ಟರ ಸಂಖ್ಯೆ:01, 09, 13, 41 & 70 ರಲ್ಲಿನ ಉದ್ಯಾನವನಗಳನ್ನು 30 ವರ್ಷಗಳ ಅವಧಿಗೆ, ಪ್ರತಿ ವರ್ಷ, ಪ್ರತಿ ಎಕರೆಗೆ ರೂ.1,500/- ರಂತೆ ದರ ನಿಗಧಿಪಡಿಸಿ, ಲೀಸ್ ಆಧಾರದ ಮೇಲೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇವರಿಗೆ ಈ ಕೆಳಕಂಡ ಷರತ್ತುಗೊಳಪಟ್ಟು ಹಸ್ತಾಂತರಿಸಿ ಆದೇಶೀಸಿದೆ.

1. ಬಾಗಲಕೋಟೆ ನವನಗರದಲ್ಲಿರುವ 05 ಸೆಕ್ಟರ್ ಸಂ. 01, 09, 13, 41 ಮತ್ತು 70 ಗಳಲ್ಲಿನ ಉದ್ಯಾನವನಗಳಿಗೆ ರೂ.1500/- ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ ದರ ನಿಗಧಿಪಡಿಸುವುದು ಮತ್ತು ಪ್ರತಿ ವರ್ಷದ ಲೀಸ್ ಮೊತ್ತವನ್ನು ನಿಗಮದ ಖಾತೆಗೆ ಭರಿಸುವುದು.
2. ಲೀಸ್ ಅವಧಿಯನ್ನು 30 ವರ್ಷಕ್ಕೆ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಸಂಸ್ಥೆಯೊಂದಿಗೆ ಕರಾರು ಮಾಡಿಕೊಳ್ಳುವುದು.
3. ಲೀಸ್ ಅವಧಿಯಲ್ಲಿ ಪ್ರತಿ 05 ವರ್ಷದ ಅವಧಿ ನಂತರ ಶೇ.10 ರಷ್ಟು ಲೀಸ್ ದರವನ್ನು ಹೆಚ್ಚಿಸಿ, ಲೀಸ್ ಮೊತ್ತವನ್ನು ನಿಗದಿಪಡಿಸುವುದು
4. ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ 135ನೇ ಬೋರ್ಡ್ ಸಭೆಯ ತಿರುವಳಿಯಲ್ಲಿನ ಆಗ್ರಿಮೆಂಟ್ ಷರತ್ತುಗಳನ್ನು ಅಳವಡಿಸಿದ ಮತ್ತು ಆಗ್ರಿಮೆಂಟ್ ಕರಾರುಗಳನ್ನು ಒಳಗೊಂಡಂತೆ ಲೀಸ್ ಒಪ್ಪಂದ ಪತ್ರದ ಕರಡನ್ನು ಪ್ರಾಧಿಕಾರದ ಕಾನೂನು ಸಲಹೆಗಾರರಿಂದ ಪಡೆದುಕೊಂಡು ಹಾಗೂ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕ್ರಮ ಕೈಗೊಳ್ಳುವುದು.
5. ಪ್ರಸ್ತಾಪಿಸಿದ 5 ಸೆಕ್ಟರ್‌ಗಳಲ್ಲಿನ ಉದ್ಯಾನವನಗಳನ್ನು ಲೀಸ್ ಅವಧಿಯು ಪೂರ್ಣಗೊಂಡ ನಂತರ ಸುಸ್ಥಿತಿಯಲ್ಲಿ ಮರಳಿ ಪ್ರಾಧಿಕಾರಕ್ಕೆ ಹಸ್ತಾಂತರಿಸುವುದು ಅಥವಾ ಲೀಸ್ ಅವಧಿಯನ್ನು ಮುಂದುವರೆಸುವುದು ಇಚ್ಛಿಸಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು."

ಈ ಆದೇಶವನ್ನು ಕಂದಾಯ ಇಲಾಖೆಯ ಆದೇಶ ಸಂ. ಆರ್.ಡಿ. 32 ಎಲ್.ಜಿ.ಪಿ 2019, ದಿನಾಂಕ:01.02.2021 ಮತ್ತು ತೋಟಗಾರಿಕೆ ಇಲಾಖೆಯ ಟಿಪ್ಪಣಿ ಸಂಖ್ಯೆ: ತೋ.ಇ. 338 ಎಚ್. ಜಿ. ಎಮ್. 2021 ದಿನಾಂಕ: 12.11.2021 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

17/01/2022
(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ

**ಪ್ರತಿಯನ್ನು:**

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಆಡಿಟ್), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.

3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ., ಬೆಂಗಳೂರು
6. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲಬಾಗ, ಬೆಂಗಳೂರು.
7. ಆಯುಕ್ತರು, ಪು & ಪು ಮತ್ತು ಭೂಸ್ವಾಧೀನ,, ಕೃ.ಮೇ.ಯೋ., ನವನಗರ,ಬಾಗಲಕೋಟೆ,.
8. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
9. ಪ್ರಧಾನ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
10. ಮುಖ್ಯ ಇಂಜಿನಿಯರ್, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಧಿಕಾರ, ನವನಗರ, ಬಾಗಲಕೋಟೆ.
11. ರಿಜಿಸ್ಟ್ರಾರ್, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ.
12. ಹೆಚ್ಚುವರಿ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
13. ಸರ್ಕಾರದ ಉಪ ಕಾರ್ಯದರ್ಶಿಗಳು (ಕೃಭಾಜನಿನಿ), ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
14. ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು.